ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ
ದಿನಾಂಕ : DATE 31/1/20

# ಕುರುಬರ ಬೇಡಿಕೆಗೆ ಸರ್ಕಾರ ಸ್ಪಂದಿಸಲಿ: ಈಶ್ವರಪ್ಪ

## ಕುರುಬ ಸಮಾಜ ಎಸ್‌ಟಿಗೆ ಸೇರಿಸಲು ಸಚಿವರಿಂದ ಒತ್ತಾಯ . ಫೆಬ್ರವರಿ 7ಕ್ಕೆ ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಸಲು ನಿರ್ಧಾರ

## ಕನಕ ಗುರುಪೀಠ ಶ್ರೀಗಳ ನೇತೃತ್ವದಲ್ಲಿ ಮೀಸಲಾತಿಗೆ ಬೃಹತ್ ಸಮಾವೇಶ . ಜ.15ರಂದು ಕಾಗಿನೆಲೆಯಿಂದ ಬೆಂಗಳೂರಿಗೆ ಪಾದಯಾತ್ರೆ

• ಕನ್ನಡಪ್ರಭ ವಾರ್ತೆ ಬಾಗಲಕೋಟೆ

ಕುರುಬ ಸಮುದಾಯಕ್ಕೆ ಸಿಗಬೇಕಾದ ಮೀಸಲಾತಿ ಪಡೆಯಲು ಹಾಗೂ ಸಮುದಾಯದಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಮಾವೇಶ ಆಯೋಜಿಸಲಾಗಿದ್ದು, ನ್ಯಾಯಯುತವಾದ ಬೇಡಿಕೆಗೆ ಸರ್ಕಾರ ಸ್ಪಂದಿಸಬೇಕು ಎಂದು ಸಚಿವ ಕೆ.ಎಸ್.ಈಶ್ವರಪ್ಪ ಒತ್ತಾಯಿಸಿದರು.

ನವನಗರದ ಕಾಳಿದಾಸ ಕಾಲೇಜು ಮೈದಾನದಲ್ಲಿ ಕನಕ ಗುರುಪೀಠದ ಶ್ರೀಗಳ ನೇತೃತ್ವದಲ್ಲಿ ಎಸ್‌ಟಿ ಮೀಸಲಾತಿಗಾಗಿ ನಡೆದ ಸಮಾವೇಶದಲ್ಲಿ ಮಾತನಾಡಿದ ಅವರು, ಈ ಸಮಾವೇಶ ನಿಜಕ್ಕೂ ಯಶಸ್ವಿಯಾಗಿದೆ. ನೋಡಿ ಈ ಸಮಾವೇಶವನ್ನು ನೋಡಿದ್ದರೆ ಇಲ್ಲಿಯೇ ಮೀಸಲಾತಿ ನೀಡುತ್ತಿದ್ದರು. ಸ್ವಾಮೀಜಿಯವರ ಆಶೀರ್ವಾದ ... ಪಕ್ಷಗಳ ಮುಖಂಡರು ಜಾಗೃತರಾಗಿದ್ದರಿಂದ ಮೀಸಲಾತಿ ಶೀಘ್ರವಾಗಿಯೂ ಸಿಗಲಿದೆ ಎಂದರು.

... ಜನಾಂಗದವರು ಮಾತನಾಡಿ ... ಎಸ್‌ಟಿ ಮೀಸಲಾತಿಯಿಂದ ಸಮಗ್ರವಾಗಿಯೂ ... ಕಾಡಿನಲ್ಲಿರುವ ಕುರು ಕಾಯುವ



ಬಾಗಲಕೋಟೆಯಲ್ಲಿ ಎಸ್‌ಟಿ ಮೀಸಲಾತಿಗಾಗಿ ನಡೆದ ಸಮಾವೇಶದಲ್ಲಿ ಸಚಿವ ಕೆ.ಎಸ್.ಈಶ್ವರಪ್ಪ, ಎಂಟಿಬಿ ನಾಗರಾಜ್, ವಿಶ್ವನಾಥ್ ಇತರರು.

ಕುರುಬರಿಗೆ ಸಹಾಯವಾಗಲಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಎಂಟಿಬಿ ನಾಗರಾಜ್ ಮಾತನಾಡಿ, ಹೋರಾಟವನ್ನು ಬಾಗಲಕೋಟೆಯಿಂದ ಸಮಾವೇಶ ಮಾಡುವ ಮೂಲಕ ಆರಂಭಿಸಿದ್ದು, ರಾಜ್ಯದ ವಿವಿಧ ವಿಭಾಗಗಳಲ್ಲಿಯೂ ಸಮಾವೇಶ ಮಾಡುವ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ನಮ್ಮ ಬೇಡಿಕೆ ಕುರಿತು ಗಮನ ಸೆಳೆಯಲಾಗುವುದು ಎಂದು ತಿಳಿಸಿದರು.

ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ಕಾಗಿನೆಲೆ ಕನಕ ಗುರುಪೀಠದ ಶ್ರೀಗಳು, ಮಾಜಿ ಸಚಿವ ಎಚ್.ಎಂ.ರೇವಣ್ಣ, ಮೀಸಲಾತಿ ಹೋರಾಟ ಸಮಿತಿಯ ಕೆ.ವಿರೂಪಾಕ್ಷಪ್ಪ, ಮುಕುಡಪ್ಪ, ಕಾಂತೇಶ, ಎಲ್.ಎಂ.ಶಾಂತಗಿರಿ, ಕಾಶೀನಾಥ ಹುದ್ದೆದಾರ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

**ಫೆ.7ಕ್ಕೆ ಸಮಾವೇಶಕ್ಕೆ ನಿರ್ಧಾರ:** ಬಾಗಲಕೋಟೆಯ ಸಮಾವೇಶದಲ್ಲಿ ಜ.15ಕ್ಕೆ ಕಾಗಿನೆಲೆಯಿಂದ ಬೆಂಗಳೂರಿನವರೆಗೆ ಬೃಹತ್ ಪಾದಯಾತ್ರೆ, ನಡೆಸಿ, ಫೆ. 7ಕ್ಕೆ ಬೆಂಗಳೂರಿನಲ್ಲಿ ಬೃಹತ್ ಕಾರ್ಯಕ್ರಮ ಆಯೋಜಿಸಿ ಸರ್ಕಾರದ ಮೇಲೆ ಒತ್ತಡ ತರಲು ನಿರ್ಧರಿಸಲಾಯಿತು.

### ಅಧಿಕಾರ ತ್ಯಾಗಕ್ಕೂ ಸಿದ್ಧರಾಗಿ: ಸ್ವಾಮೀಜಿ

ಸಮುದಾಯಕ್ಕಾಗಿ ತ್ಯಾಗ ಮಾಡಬೇಕೆಂದರೆ ಸಮುದಾಯದ ಶಾಸಕರು, ಸಚಿವರು ಅಧಿಕಾರ ತ್ಯಾಗ ಮಾಡಲೇಬೇಕಾಗುತ್ತದೆ ಎಂದು ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು. ಕುರುಬ ಸಮಾಜದ ಎಚ್.ವಿಶ್ವನಾಥ್, ಎಂಟಿಬಿ, ಆರ್.ಶಂಕರ್‌ಗೆ ಮಾತು ಕೊಟ್ಟಂತೆ ಸಚಿವ ಸ್ಥಾನ ನೀಡಬೇಕು. ಮುಖ್ಯಮಂತ್ರಿ, ಸಹ ಮಾತು ಕೊಟ್ಟಂತೆ ನಡೆಯುತ್ತಾರೆ ಎನ್ನುವ ಭರವಸೆ ಇದೆ. ಸ್ಥಾನ ಕೊಡದೆ ಹೋದರೆ ಯಾವ ಕ್ರಮಕ್ಕೆ ಹೋಗಬೇಕು ಎಂಬ ಕುರಿತು ಚಿಂತನೆ ನಡೆಸುವುದಾಗಿ ಶ್ರೀಗಳು ಹೇಳಿದರು.